
ಸಂಬಂಧಿಕರು ಯಾರ ಬಾಯಲ್ಲಿ ನೋಡು ಇದೇ ಮಾತು. ಇವರು ಹತ್ತಿರ ಸುಳಿದರೆ ಸಾಕು, 'ಛೇ ಥೂ' ಅನ್ನುವರು. ಹುಡುಗರು ಕೇಕೆ ಹಾಕಿಕೊಂಡು ನಗುವರು. ಸಹ ಶಿಕ್ಷಕರು ಯಾರೂ ಹತ್ತಿರ ಸುಳಿಯದೆ ದೂರದೂರವೇ ನಿಲ್ಲುವರು. ಮಕ್ಕಳ ಪೋಷಕರು ದುರುಗುಟ್ಟಿ ನೋಡಿ, ಸೀದಾ ಮುಖ್ಯೋಪಾಧ್ಯಾಯರ ಕೊಠಡಿಗೆ ಹೋಗುವರು. ಮುಖ್ಯೋಪಾಧ್ಯಾಯರು ಯಾವ ಕಾರಣವನ್ನೂ ಕೊಡದೆ ಕೆಲದಿನ ಶಾಲೆಗೆ ಬರಕೂಡದೆಂದು ಹೇಳುವರು. ಮನೆಯ ನೆರೆಹೊರೆಯವರ ನಡೆನುಡಿಯಲ್ಲೂ ಬದಲಾವಣೆ ಕಾಣುವುದು. ಎಲ್ಲರೂ ಇವರ ಮರೆಯಲ್ಲಿ ಗುಸುಗುಸು ಮಾತಾಡಿಕೊಳ್ಳುವುದು ಕೇಳಿಸುವುದು. ಕೇರಿಯ ಹುಡುಗರು ಶಿಳ್ಳೆ ಹೊಡೆಯುತ್ತಾ ಹಿಂಬಾಲಿಸುವರು. ಎಲ್ಲರೂ ಯಾಕೆ ಹೀಗೆ ವರ್ತಿಸ್ತಾ ಇದ್ದಾರೆ ಅಂತ ತಲೆಕೆಡಿಸಿಕೊಂಡು ಹನಿಗಣ್ಣಾದ ಶಾರದಾ ಟೀಚರಿನ ಗಮನಕ್ಕೂ ಈ ವಿಡಿಯೋಗಳು ಬಿದ್ದವು. ಅದೆಷ್ಟು ಹೌಹಾರಿ ಎದೆಎದೆ ಚೆಚ್ಚಿಕೊಂಡರೋ ಏನೋ ಯಾರು ಬಲ್ಲರು? ಆದರೆ ತಕ್ಷಣವೇ ತಿಳಿದುಬಿಟ್ಟಿದೆ ಅವರಿಗೆ ಇದು ವೆಂಕಟನದ್ದೇ ಕೆಲಸ ಅಂತ. ಆದರೆ ಪುನಃ ಪೊಲೀಸ್ ಸ್ಟೇಷನಿನ ಮೆಟ್ಟಿಲು ಹತ್ತಿದರೂ ಅವನ ಹೆಸರು ಎತ್ತದೆ, ಯಾರೋ ಕಿಡಿಗೇಡಿಗಳು ಹೀಗೆ ಮಾಡಿದ್ದಾರೆ ಎಂದಷ್ಟೇ ಹೇಳಿದ್ದಾರೆ. ಸೈಬರ್ ಕ್ರೈಂ ಬ್ರ್ಯಾಂಚಿನವರು ವೆಂಕಟನ ಸ್ನೇಹಿತನನ್ನು ಹಿಡಿದು ವಿಡಿಯೋಗಳನ್ನು ಡಿಲೀಟ್ ಮಾಡಿಸಿಕೊಟ್ಟರು. ಆದರೆ ಅಷ್ಟರಲ್ಲಿ ಹೋಗುವ ಮಾನ ಹೋಗಿಯಾಗಿತ್ತು. ಯಾರೋ ಅಬ್ಬೇಪಾರಿಗಳು ಹೀಗೆ ಮಾಡಿರುವುದು... ಇದಕ್ಕೂ ಶಾರದಾ ಟೀಚರಿಗೂ ಏನೇನೂ ಸಂಬಂಧವಿಲ್ಲ. ಅವರಿಗೇನೇನೂ ತಿಳಿದಿಲ್ಲ ಅಂತ ಗೊತ್ತಾದರೂ ಯಾರೂ ಮೊದಲಿನ ಗೌರವ ಮರ್ಯಾದೆಗಳನ್ನ ಕೊಟ್ಟು ಮಾತಾಡಿಸಲು ಸಿದ್ಧರಿಲ್ಲ. ಅವರ ಜೊತೆಗೆ ಅರೆಘಳಿಗೆ ನಿಂತು ಮಾತಾಡಿದರೆ ಸಾಕು ತಮ್ಮ ಮರ್ಯಾದೆಗೆಲ್ಲಿ ಕುತ್ತು ಬರುವುದೋ ಎಂಬ ಆತಂಕ ಅವರುಗಳಿಗೆ..! ಇಂತಹ ಪರಿಸ್ಥಿತಿಯಲ್ಲೂ ಕೆಲಸ ಬಿಡದೆ ಒಂಟಿ ಕೊರಡಿನಂತೆ ಒಣಗುತ್ತ ಮುಂದುವರೆದರು ಶಾರದಾ ಟೀಚರ್.



ಪರಮೇಶ್ವರಪ್ಪನವರಿಗೆ ಮದುವೆಯಾಯಿತು. ಮದುವೆಗೆ ಶಾಲೆಯ ಎಲ್ಲಾ ಸಿಬ್ಬಂದಿಯೂ ಹೋಗಿದ್ದರು. ಆದರೆ ಶಾರದಾ ಟೀಚರ್ ಮಾತ್ರ ಹೋಗಲಿಲ್ಲ. ಕೋಕಿಲಳಿಗೆ ಎರಡನೇ ಮಗುವಾದ ಸುದ್ದಿ ಬಂತು. ಈಗ ಮೊದಲಿನ ಹಾಗೆ ವೆಂಕಟ ಏನೂ ಕಾಟ ಕೊಡುತ್ತಿಲ್ಲವೆಂದೂ, ತಾವು ಚೆನ್ನಾಗಿ ಇರುವುದಾಗಿಯೂ, ಆದರೆ ತವರಿಂದ ಯಾರೂ ತನ್ನನ್ನು ನೋಡಲು ಬರದಿದ್ದರೇನೇ ಕ್ಷೇಮವೆಂದೂ ಕೋಕಿಲ ಸಂದೇಶ ಕಳಿಸಿದ್ದಳು. ಕಿಟ್ಟಿ ಲೋಕಲ್ ಪುಢಾರಿಯೊಬ್ಬನ ಸಹಾಯಕನಾಗಿ ಸೇರಿಕೊಂಡ. ಮನೆಗೆ ಬರುವುದನ್ನೇ ಬಿಟ್ಟುಬಿಟ್ಟ. ಕೋದಂಡಪಾಣಿ ಯಾರೋ ಅನ್ಯಧರ್ಮೀಯ ಹೆಂಗಸನ್ನು ಮದುವೆಯಾಗಿ ಊರುಬಿಟ್ಟು ಹೋದ ಅನ್ನುವ ಸುದ್ದಿ ಕೇಳಿದ ಸುನಂದಮ್ಮ ತಂಬಿಗೆ ಹಾಲು ಕುಡಿದರು. ಹೊತ್ತು ಕಳೆಯುವುದಕ್ಕಾಗಿ ಪಕ್ಕದ ಆಶ್ರಮವೊಂದರ ಸ್ವಾಮೀಜಿಗಳ ಪ್ರವಚನಗಳನ್ನು ಕೇಳುತ್ತಾ ಸತ್ಸಂಗದಲ್ಲಿ ನಿರತರಾಗತೊಡಗಿದರು. ದಿನವೊಂದು... ಎರಡು... ಮೂರು... ಹೀಗೆ ಕಾಲ ಸರಿಯುತ್ತಲೇ ಇದೆ. ಶಾರದಾ ಟೀಚರದ್ದು ಅದೇ ಬಸ್ ರೂಟು... ಹೆಚ್ಚೂಕಮ್ಮೀ ಅದೇ ಸೀಟು... ಕಿಟಕಿಯ ಪಕ್ಕ ಕುಳಿತು ಕಿವಿಗಳಿಗೆ ಇಯರ್ ಫೋನು ಹಾಕಿಕೊಂಡು ಕಿಟಕಿ ನೋಡುತ್ತಾ ಕೂರುತ್ತಾರೆ. ಕಣ್ಣಿಗೆ ಕನ್ನಡಕ ಬಂದಿದೆ. ತಲೆಗೂದಲು ಅಲ್ಲಲ್ಲಿ ನೆರೆತಿದೆ. ಕೆಲವೊಮ್ಮೆ ಆಫೀಸಿನ ವ್ಯಾನು ಬರದಿದ್ದಾಗ ಇದೇ ಬಸ್ಸು ಹತ್ತಿ ನಾನೂ ಎದುರಿನ ಸೀಟಿನಲ್ಲಿ ಕೂರುತ್ತೇನೆ. 'ಬಂದೇ ಬರುತಾವ ಕಾಲ..' ಹಾಡನ್ನು ಅವರು ಅದಾಗ ಹಾಡುತ್ತಿರುವರೋ ಅಂತ ನನಗೆ ಭಾಸವಾಗುತ್ತದೆ!

●